ದಿಃ **10.08.2015**
ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದ

ವೆಂಕಟೇಗೌಡ ಮತ್ತು ರಂಗೇಗೌಡ ಯಾವ ಸಾಲಿನಲ್ಲಿ ಆಸ್ತಿಗಳಲ್ಲಿ ಪಾಲುವಿಭಾಗ ಮಾಡಿಕೊಂಡಿದ್ದಾರೆ ಎಂದರೆ 50 ವರ್ಷವಾಗಿರಬಹುದು. ವೆಂಕಟೇಗೌಡ ಅಂದರೆ ನನ್ನ ತಂದೆ. ವೆಂಕಟೇಗೌಡ ಮತ್ತು ರಂಗೇಗೌಡ ಹಿಸ್ಸೆ ಮಾಡಿಕೊಂಡ ಬಗ್ಗೆ ದಾಖಲೆಗಳನ್ನು ಮಾಡಿಕೊಂಡಿರಲಿಲ್ಲ. ಅವರ ಹಿಸ್ಸೆಗೆ ಯಾವ ಯಾವ ಸ್ವತ್ತುಗಳು ಹೋಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ಜಯಮ್ಮ ಮತ್ತು ಹೊಂಬಾಳಮ್ಮ ಎಂಬ ಇಬ್ಬರು ಹೆಂಡತಿಯರು.

ಹೊಂಬಾಳಮ್ಮನಿಗೆ ಜಯಮ್ಮ ಮತ್ತು ಸಾವಿತ್ರಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು. ವೆಂಕಟೇಗೌಡರ 2ನೇ ಹೆಂಡತಿ ಜಯಮ್ಮನಿಗೆ ಮಕ್ಕಳು ಇರುವುದಿಲ್ಲ. ಹೊಂಬಾಳಮ್ಮ 3 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ದಿನಾಂಕ ಮತ್ತು ಇಸವಿ ಗೊತ್ತಿರುವುದಿಲ್ಲ. ಜಯಮ್ಮ ಈಗ ಜೀವಂತ ಇರುತ್ತಾರೆ. ನಾನು ದಾವೆ ಸಲ್ಲಿಸುವ ಕಾಲಕ್ಕೆ ಹೊಂಬಾಳಮ್ಮ ಜೀವಂತ ಇದ್ದರು ಎಂದರೆ ಸರಿ. ವೆಂಕಟೇಗೌಡರ 2ನೇ ಹೆಂಡತಿ ಜಯಮ್ಮ ಮಾರನಹಳ್ಳಿ ಗ್ರಾಮದಲ್ಲಿ ವಾಸವಿರುತ್ತಾರೆ. ನನ್ನ ಸಹೋದರಿ ಸಾವಿತ್ರಮ್ಮ ಹೊಂಬಾಳಮ್ಮ ತೀರಿಕೊಳ್ಳುವುದಕ್ಕಿಂತ ಪೂರ್ವದಲ್ಲಿಯೇ ತೀರಿಕೊಂಡಿರುತ್ತಾರೆ. ಸದರಿ ವಿಚಾರವನ್ನು ದಾವೆಯಲ್ಲಿ ಬರೆಸಿರುತ್ತೇವೆ.

ಮರಣ ಶಾಸನ ಪತ್ರದ ದಿನಾಂಕ, ತಿಂಗಳು ಮತ್ತು ಇಸವಿ ನಾನು ಅನಕ್ಷರಸ್ಥೆ ಇರುವುದರಿಂದ ನನಗೆ ಗೊತ್ತಾಗುವುದಿಲ್ಲ. ಸದರಿ ಮರಣಶಾಸನದ ಬಗ್ಗೆ ನಮ್ಮ ವಕೀಲರು ತಿಳಿಸಿರುತ್ತಾರೆ. ಮರಣ ಶಾಸನ ಪತ್ರ ಯಾರ ಬಳಿ ಇದೆ ಎಂದು ನನಗೆ ಗೊತ್ತಿಲ್ಲ. ಮರಣ ಶಾಸನ ಪತ್ರದ ಬಗ್ಗೆ ನಮ್ಮ ವಕೀಲರಿಗೆ ನಾನು ತಿಳಿಸಿರುವುದಿಲ್ಲ.

1ನೇ ಪ್ರತಿವಾದಿ ಈಗ್ಗೆ 2 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. 1ನೇ ಪ್ರತಿವಾದಿಗೆ ಪಿತ್ರಾರ್ಜಿತ ಆಸ್ತಿ 8 ಎಕರೆ ಇರಬಹುದು. ಅದರ ಸರ್ವೆ ನಂಬರ್ ಮತ್ತು ಚಕ್ಕುಬಂದಿ ನನಗೆ ಗೊತ್ತಿಲ್ಲ, ಆದರೆ ಜಮೀನುಗಳ ಹೆಸರು ಗೊತ್ತು ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ವಾದ ಪತ್ರದಲ್ಲಿ ಈ ಬಗ್ಗೆ ನಾನು ಬರೆಸಿರಬಹುದು. ವಾದ ಪತ್ರ ಬರೆಯಲು ವಕೀಲರಿಗೆ ನನ್ನ ಮಗ ಮಾಹಿತಿ ಕೊಟ್ಟಿರುತ್ತಾನೆ. ಅವನು ಏನು ಹೇಳಿ ಬರೆಸಿದ್ದಾನೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತನ್ನ ದತ್ತು ಮಕ್ಕಳಿಗೆ ಮರಣಶಾಸನ ಪತ್ರ ಬರೆದು ಮೃತಪಟ್ಟಿರುತ್ತಾರೆ

ಎಂದರೆ ಸರಿಯಲ್ಲ, ಅವರಿಗೆ ಯಾರೂ ದತ್ತು ಮಕ್ಕಳು ಇರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಪ್ರತಿವಾದಿ ಡಿ-1(ಎ) ಮತ್ತು (ಡಿ) ನಮ್ಮೂರಿನಲ್ಲಿಯೇ ವಾಸವಾಗಿರುತ್ತಾರೆ ಎಂದರೆ ಸರಿ. ಅವರು ನಮ್ಮೂರಿನಲ್ಲಿ 1ನೇ ತರಗತಿ ವರೆಗೆ ಓದಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ನನ್ನ ತಾಯಿ ಹೊಂಬಾಳಮ್ಮ ಜೀವಂತ ಇರುವಾಗಲೇ ಪ್ರತಿವಾದಿ 1(ಎ) ಮತ್ತು (ಡಿ) ರವರನ್ನು ದತ್ತು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಇರುವುದರಿಂದ ನನಗೆ ಯಾವುದೇ ಹಿಸ್ಸಾ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ನಿಗಾವಣೆಯನ್ನು ಪ್ರತಿವಾದಿ 1(ಎ) ಮತ್ತು (ಡಿ) ರವರೇ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ.

ನಮ್ಮ ಜಾತಿಯಲ್ಲಿ ತಂದೆ ಮೃತಪಟ್ಟರೆ ಹಿರಿಯ ಮಗ ಕ್ರಿಯಾವಿಧಿಗಳನ್ನು ಮಾಡುತ್ತಾನೆ, ತಾಯಿ ಸತ್ತಾಗ ಕಿರಿಯ ಮಗ ಮಾಡುತ್ತಾನೆ ಎಂದರೆ ಸರಿ. ನನ್ನ ತಂದೆ 1ನೇ ಪ್ರತಿವಾದಿಗೆ ಗಂಡು ಸಂತಾನ ಇಲ್ಲದೆ ಇದುದ್ದರಿಂದ ಪ್ರತಿವಾದಿ 1(ಎ) ರವರೇ ಕ್ರಿಯಾವಿಧಿಗಳನ್ನು ಮಾಡಿರುತ್ತಾನೆ ಎಂದರೆ ಸರಿ. ನನ್ನ ತಾಯಿ ಹೊಂಬಾಳಮ್ಮ ಮೃತಪಟ್ಟಾಗ ಪ್ರತಿವಾದಿ 1(ಡಿ) ರವರೇ ಕ್ರಿಯಾವಿಧಿಗಳನ್ನು ಮಾಡಿರುತ್ತಾನೆ ಎಂದರೆ ಸರಿ. ನನ್ನ ತಂದೆ ದಿಃ 11.03.1992 ರಲ್ಲಿ ಪಂಚಾಯಿತಿ ಕರಾರು ಪತ್ರ ಮೂಲಕ ಸರ್ವೆ ನಂ.4/19 ರಲ್ಲಿ 5 ವರೆ ಗುಂಟೆ, ಸರ್ವೆ ನಂ.87/3 ರಲ್ಲಿ 4 ವರೆ ಗುಂಟೆ ಜಮೀನು ನನಗೆ ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ, ನಮ್ಮೂರಿನಲ್ಲಿ ಒಂದು ಮನೆಯನ್ನು ನನಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ, ನಾನು ವೆಂಕಟೇಗೌಡರಿಂದ ಮನೆಯನ್ನು ಕ್ರಯಕ್ಕೆ ಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಈ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ.

ಮನೆಯ ಖಾತೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ಈ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ.

1ನೇ ಪ್ರತಿವಾದಿಯ 2ನೇ ಹೆಂಡತಿ ಜಯಮ್ಮ ಪ್ರತಿವಾದಿ 1(ಎ) ಮತ್ತು (ಡಿ) ರವರ ನಿಗಾವಣೆಯಲ್ಲಿರುತ್ತಾರೆ ಎಂದರೆ ಸರಿ. 2ನೇ ಪ್ರತಿವಾದಿಯು ನಮಗೆ ತಕರಾರು ಮಾಡುತ್ತಿದ್ದ ಕಾರಣ ಅವರನ್ನು ಪಕ್ಷಕಾರರನ್ನಾಗಿ ಮಾಡಿರುತ್ತೇನೆ. 1ನೇ ಪ್ರತಿವಾದಿ ಮತ್ತು ಹೊಂಬಾಳಮ್ಮ ಅವರಿಗೆ ಗಂಡು ಸಂತಾನ ಇಲ್ಲದ ಕಾರಣ ಪ್ರತಿವಾದಿ 1(ಎ) ಮತ್ತು (ಡಿ) ರವರನ್ನು ವಿಧಿವಿಧಾನದ ಪ್ರಕಾರ ದತ್ತು ಸ್ವೀಕಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದತ್ತು ಸ್ವೀಕಾರ ಕಾರ್ಯಕ್ರಮದಲ್ಲಿ ನಾನು, ನನ್ನ ತಂದೆ ತಾಯಿ ಮತ್ತು ಊರಿನವರು ಸೇರಿದ್ದರು ಎಂದರೆ ಸರಿಯಲ್ಲ, 2ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಸಾವಿತ್ರಮ್ಮರವರಿಂದ ದತ್ತು ಸ್ವೀಕಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಪ್ರತಿವಾದಿ 1(ಎ) ಮತ್ತು (ಡಿ) ಈಗಲೂ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿ. ನಾನು ನನ್ನ ಗಂಡನ ಮನೆಯಲ್ಲಿ ವಾಸವಿರುತ್ತೇನೆ. ಪ್ರತಿವಾದಿ 1(ಎ) ಮತ್ತು (ಡಿ) ರವರಿಗೆ ಆಸ್ತಿ ಹೋಗುತ್ತದೆ ಎಂಬ ಉದ್ದೇಶಕ್ಕಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತನ್ನ ಆಸೆಯಂತೆ ಮರಣಶಾಸನ ಪತ್ರ ಬರೆದು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1(ಎ) ಮತ್ತು (ಡಿ) ರವರ ಎಲ್ಲಾ ಸರ್ಕಾರಿ ದಾಖಲೆಗಳಲ್ಲಿ ಅವರ ಹೆಸರು ಚಂದ್ರ ಬಿನ್ ವೆಂಕಟೇಗೌಡ, ಗೋವಿಂದ ಬಿನ್ ವೆಂಕಟೇಗೌಡ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮೂರಿನಲ್ಲಿ ನ್ಯಾಯ ಪಂಚಾಯಿತಿ ಮಾಡಿರುವುದಿಲ್ಲ. 1ನೇ ಪ್ರತಿವಾದಿ ಮರಣಶಾಸನ ಮಾಡಿದ್ದರಿಂದ ಆಸ್ತಿಗಳಲ್ಲಿ ನನಗೆ ಯಾವುದೇ ಹಿಸ್ಸಾ ಹಕ್ಕು

ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರತಿವಾದಿಯರೇ ಪತ್ರ ಸೃಷ್ಟಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ-1 ದಾವಾ ಆಸ್ತಿಗಳಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ಸದರಿ ನಿಪಿ-1 ಮತ್ತು 10 ರಲ್ಲಿ ನಮೂದಾಗಿರುವ ವ್ಯಕ್ತಿ ಬೇರೆ ಗೋವಿಂದ ಎಂದರೆ ಸರಿಯಲ್ಲ.

ಸಣ್ಣೇಗೌಡ ಬಿನ್ ಹನುಮೇಗೌಡ ನನ್ನ ಮಾವ. ಗೋವಿಂದೇಗೌಡ ಬಿನ್ ರಂಗೇಗೌಡರಿಗೆ ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಸ.ಇ.ಎ.ಒ.,

ಅಧಿಕ ಸಿವಿಲ್ ಜಡ್ಜ್
ಚನ್ನರಾಯಪಟ್ಟಣ